**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 2314/2019 ಚಾಸಾಃ 11 ಪ್ರಾಸಾಃ 6**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೀತಾ |
| ಗಂಡನ ಹೆಸರು | : | ಕೃಷ್ಣ |
| ವಯಸ್ಸು | : | 50 ವರ್ಷ |
| ವೃತ್ತಿ | : | ಟೈಲರಿಂಗ್ |
| ವಾಸ | : | ನಾಯಂಡಹಳ್ಳಿ, ಬೆಂಗಳೂರು |

**ಸಾಕ್ಷಿಯನ್ನು ದಿಃ 16.04.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ನನಗೆ ಚಾಸಾ-1 ಮತ್ತು ಆರೋಪಿಗಳು ಪರಿಚಯ ಇರುತ್ತಾರೆ. ಆರೋಪಿಗಳು ಚೀಟಿಯನ್ನು ನಡೆಸಿರುತ್ತಾರೆ. ಆರೋಪಿಗಳು ಚೀಟಿ ನಡೆಸುತ್ತಿದ್ದ ಸಮಯದಲ್ಲಿ ನಾನು ಅವರ ಬಳಿ 01 ಚೀಟಿಯನ್ನು ಕಟ್ಟುತ್ತಿದ್ದೆನು. ನಾನು ಚೀಟಿಗೆ 5000/- ರೂ ಗಳಂತೆ 20 ತಿಂಗಳು ಚೀಟಿ ಹಣವನ್ನು ಕಟ್ಟಿರುತ್ತೇನೆ. ಆರೋಪಿಗಳು ನಾನು ಚೀಟಿ ಕಟ್ಟುತ್ತಿದ್ದ ಬಗ್ಗೆ ಯಾವುದೇ ರಶೀದಿಯನ್ನು ಕೊಡುತ್ತಿರಲಿಲ್ಲ. ನಾನು 20 ತಿಂಗಳು ಚೀಟಿ ಹಣ ಕಟ್ಟಿದ ನಂತರ ಆರೋಪಿಗಳು ಚೀಟಿ ಮಾಡುವುದನ್ನು ನಿಲ್ಲಿಸಿ ರಾತ್ರೋರಾತ್ರಿ ಮನೆ ಖಾಲಿ ಮಾಡಿಕೊಂಡು ಹೋಗಿರುತ್ತಾರೆ. ನನಗೆ ಆರೋಪಿಗಳಿಂದ ಒಂದು ಲಕ್ಷಕ್ಕೂ ಹೆಚ್ಚು ಹಣ ಬರಬೇಕಾಗಿರುತ್ತದೆ. ಆರೋಪಿಗಳು ನನಗೆ ಚೀಟಿ ಹಣವನ್ನು ಕೊಡದೇ ಮೋಸ ಮಾಡಿರುತ್ತಾರೆ. ನಾನು ಮತ್ತು ಚಾಸಾ-1 ಮತ್ತು ಇತರರು ಹೋಗಿ ಪೊಲೀಸರಿಗೆ ದೂರು ಸಲ್ಲಿಸಿ ಆರೋಪಿಗಳು ಮೋಸ ಮಾಡಿರುವ ಬಗ್ಗೆ ತಿಳಿಸಿರುತ್ತೇವೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ.ಟಿ. ವಕೀಲರಿಂದಃ**

ಸಮಯಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**